ಅಂಕಣ - ಎಂಟು

# ತಲ್ಲಣಿಸದಿರು ಕಂಡ್ಯ ತಾಳು ಮನವೆ... !

Vidyagiri DHARWAD-04

## ನಾನು ನಾನಾಗಿ ಇರಬಹುದು

• ಡಾ. ಆರ್. ವಿ. ಪಾಟೀಲ

ನಾನು ಸಮಯ ಸಿಕ್ಕಾಗಲೆಲ್ಲ ಧಾರವಾಡ ಹುಚ್ಚರ ಆಸ್ಪತ್ರೆಗೆ ಭೆಟ್ಟಿ ಕೊಡುತ್ತಿದ್ದೆ. ಏಕೆಂದರೆ ತುಂಬಾ ದಿನದಿಂದ ನನ್ನೊಳಗೊಂದು ತುಡಿತ ಕಾಡುತ್ತಿತ್ತು. ಅದೇನೆಂದರೆ ಹುಚ್ಚರನ್ನು ಕುರಿತು ಏನಾದರು ಬರೆಯಬೇಕು. ಆ ಬರವಣಿಗೆಯಲ್ಲಿ ಹುಚ್ಚರು ಅನುಭವಿಸುವ ಸುಖ-ದುಃಖ ಹೇಗಿರುತ್ತದೆ? ಅವರು ಪಡುವ ಪರಿ ಪಾಟಲು, ನೋವು ಎಂತಹದು? ಎಂಬುದನ್ನು ಸ್ವತಃ ನಾನೇ ಹೋಗಿ ಖುದ್ದಾಗಿ ಹುಚ್ಚರ ಜೊತೆ ಮಾತಾಡಿ ತಿಳಿಯಬೇಕೆಂದು ಧಾರವಾಡದ ಹುಚ್ಚರ ಆಸ್ಪತ್ರೆಗೆ ಭೆಟ್ಟಿಕೊಟ್ಟು ಬರುತ್ತಿದ್ದೆ. ಅದು ಸಹಜವಾಗಿ ಹುಚ್ಚರನ್ನು ಸಂಪರ್ಕಿಸಿ ಬರೋದು-ಹೋಗೋದು ನಡೆದೇ ಇತ್ತು. ಒಂದು ದಿನ ಕೆಲ ಹುಚ್ಚರನ್ನು ಮಾತಾಡಿಸಿಕೊಂಡು ಅಲ್ಲೆ ಹೊರ ಅಂಗಳದಲ್ಲಿದ್ದ ಬೆಂಚಿನ ಮೇಲೆ ಬಂದು ಕುಳಿತುಕೊಂಡಿದ್ದೆ. ಸ್ವಲ್ಪ ಸಮಯದ ನಂತರ ಆರೋಗ್ಯಪೂರ್ಣವಾದ ದೇಹ ಶಾಂತ ಚಿತ್ತದ ಸೌಮ್ಯ ನೋಟದ ಕಣ್ಣುಗಳು, ಏನೋ ಒಂದು ರೀತಿ ಸಾಧನೆ ಮಾಡಿದ ತೃಪ್ತಿಯಲ್ಲಿದ್ದ ಮುಗುಳ್ನಗೆಯ ದುಂಡು ಮುಖದ ಚೆಲುವ ೨೬ರ ಆಸುಪಾಸಿನ ಹರೆಯದ ಯುವಕ ಬಂದು ನನ್ನ ಪಕ್ಕದಲ್ಲಿಯೇ ಕು:ಳಿತುಕೊಂಡ. ನಾನು ಅವನನ್ನು ನೋಡಿದೆ. ಅವನು ಸ್ವಲ್ಪ ಆಶ್ಚರ್ಯದಿಂದಲೇ ನೋಡುತ್ತಿದ್ದ. ಒಳಗೊಳಗೆ ಒಂದು ರೀತಿಯ ಮುಜುಗರ, ಭಯ ನನ್ನಲ್ಲಿ ಕಾಣಿಸಿಕೊಂಡಿತು. ಏಕೆಂದರೆ ಇದು ಹೇಳಿ-ಕೇಳಿ ಹುಚ್ಚರ ಆಸ್ಪತ್ರೆ. ಮಾನಸಿಕ ರೋಗಿಗಳು ಬರುವ ಸ್ಥಳ. ಸರಿಯಾಗಿದ್ದವರು ಇಲ್ಲಿ ಹೆಚ್ಚು ಕಾಲ ಕುಳಿತರೆ, ಹುಚ್ಚರೆ ಎಂದು ತಿಳಿಯುವುದುಂಟು. ಹಾಗಾಯೇ ಇಲ್ಲಿಯ ಹುಚ್ಚರು ಎಲ್ಲ ಬಗೆಯವರು. ಹೊಡೆಯಬಹುದು, ಕಚ್ಚಬಹುದು, ಚೀರಬಹುದು ಆದರೆ ಈ ಯುವಕ ಹಾಗೇನು ಮಾಡಲಿಲ್ಲ. ಏನೋ ಆಲೋಚಿಸಿದವನಂತೆ ಮಾಡಿ ಸ್ವಲ್ಪ ಆಶ್ಚರ್ಯದಿಂದಲೆ ನನ್ನನ್ನು ಕೇಳಿದ ಏಕೆ ನಿಮ್ಮ ಮನಸ್ಥಿತಿ ಸರಿ ಇಲ್ಲವೇನೋ? ನೋಡಲು ಚೆನ್ನಾಗಿ ಕಾಣುತ್ತೀರಿ ಇರ್ಲಿ ಬಿಡಿ ಸರಿ ಹೋಗುತ್ತೆ ಎಂದ. ನನಗೆ ಮಿತಿಮೀರಿದ ಆಶ್ಚರ್ಯವಾಗಿ ಅವನತ್ತ ನೋಡಿ ಇಲ್ಲಾ ನಾನು ಆರಾಮವಾಗಿಯೇ ಇದ್ದೇನೆ. ಹೌದು! ನೀನೆಕೆ ಇಲ್ಲಿದ್ದೀಯಾ? ಏತಕ್ಕಾಗಿ ಬಂದಿದ್ದೀಯಾ ಎಂದು ಕೇಳಿದೆ. ಉದಾಸೀನತೆಯ ಮುಖ ಮಾಡಿ ಮುಗುಳ್ನಗುತ್ತಾ ನಿಮ್ಮ ಪ್ರಶ್ನೆಗೆ ಹೇಗೆ ಉತ್ತರಿಸಲಿ, ಇದು ನಾನು ಊಹಿಸದ ಪ್ರಶ್ನೆಯಾಗಿತ್ತು ಇರಲಿ ನೀವು ಕೇಳಿದ್ದಕ್ಕೆ ನಾನಿಲ್ಲಿ ಬಂದ ಕಾರಣ ಹೇಳುತ್ತೇನೆ ಎಂದು ತನ್ನ ಕಥೆ ಹೇಳಲು ಪ್ರಾರಂಭಿಸಿದ. ನನ್ನ ತಂದೆ ಫೇಮಸ್ ಸರ್ಜನ್ ಒಳ್ಳೆಯ ಡಾಕ್ಟರ್ ಎಂದು ಪ್ರಸಿದ್ಧಿ ಪಡೆದಿದ್ದಾರೆ. ಅವರ ಕೊನೆ ಅಪರೂಪದ ಒಬ್ಬನೆ ಒಬ್ಬ ಮಗನಾಗಿ ಹುಟ್ಟಿದೆ. ತುಂಬಾ ಪ್ರೀತಿಯಿಂದಲೆ ಬೆಳೆಸಿದರು. ತಾಯಿ ತುಂಬಾ ಓದಿದ್ದಾರೆ. ತಾಯಿ ತನ್ನ ಕಣ್ಣು ರೆಪ್ಪೆಯಲ್ಲಿಟ್ಟು ಲಾಲಿಸಿ ಪಾಲನೆ ಮಾಡಿದರು. ಅವರ ಪ್ರೀತಿಯ ಪ್ರಪಂಚದಲ್ಲಿಯೇ ನಾನು ಮುಳುಗಿ ಹೊರ ಜಗತ್ತನ್ನೆ ಮರೆತೆ. ಇವರ ಆಸೆಯೆಂದರೆ ನಾನು ತಂದೆಯನ್ನು ಮೀರಿಸುವ ಸಾಧಕನಾಗಬೇಕೆಂಬುದು ಇದೇ ತುಡಿತ ನಿತ್ಯ ಅವರಲ್ಲಿ. ಇನ್ನು ನನ್ನ ಅಕ್ಕಂದಿರಿಬ್ಬರು ಮದುವೆಯಾಗಿದ್ದಾರೆ. ಒಬ್ಬ ಅಕ್ಕಳ ಪತಿ ಮಿಲ್ಟರಿಯಲ್ಲಿ ಕಮಾಂಡರ್ ಆಗಿದ್ದಾರೆ. ಅಪ್ಪಟ ದೇಶಭಕ್ತ. ಇನ್ನೊಬ್ಬಳ ಅಕ್ಕ ಅವಳ ಗಂಡ ಪ್ರೊಫೆಸರ್. ದೊಡ್ಡ ವಿದ್ವಾಂಸರೆಂದು ಹೆಸರು ಮಾಡಿದ್ದಾರೆ. ಇವರಿಬ್ಬರು ಅಕ್ಕಂದಿರು ನನಗೆ ಸದಾ ಹೇಳುವುದೇನೆಂದರೆ ನೀನು ನನ್ನ ಗಂಡನಂತೆ ದೇಶ ಭಕ್ತನಾಗು, ಮಿಲ್ಟರಿ ಆಫಿಸರ್ ಆಗಬೇಕು ಎಂದು ಮತ್ತೊಬ್ಬ ಅಕ್ಕ ಹೇಳೋದು ನನ್ನ ಯಜಮಾನರಂತೆ ಒಳ್ಳೆ ಪ್ರೊಫೆಸರ್



PRINCIPAL
J.S.S. Banashankari Arts, Commerce &
Shantikumar Gubbi Science College.
DHARWAD - 580 004.